ಪಿಡಬ್ಲ್ಯೂಃ 3

ಇಂದು ದಿನಾಂಕಃ 03.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿಯ ಪರ ಶ್ರೀ ಜಿ ಎಸ್ ಎಂ ವಕೀಲರಿಂದಃ

ನಾನು ಸಲ್ಲಿಸಿರುವ ಸಾಕ್ಷ್ಯ ಪ್ರಮಾಣ ಪತ್ರದಲ್ಲಿರುವ ಅಂಶಗಳ ಬಗ್ಗೆ ಮಾಹಿತಿಯನ್ನು ನಾನು ನೀಡಿರುವುದಿಲ್ಲ. ಸದರಿ ದಾಖಲೆಗಳಲ್ಲಿರುವ ಅಂಶಗಳನ್ನು ವಕೀಲರು ನನಗೆ ಓದಿ ತಿಳಿಸಿರುತ್ತಾರೆ. ಪಂಚಾಯತಿ ಆಸ್ತಿ ನಂ.402/5, 402/5 ಎ ರಲ್ಲಿ ಯಾರು ವಾಸವಾಗಿದ್ದಾರೆ ಎಂಬುದರ ಬಗ್ಗೆ ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿಯು ನಮೂದಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ದಾವೆಯನ್ನು ವಾದಿಯರು ಪ್ರತಿವಾದಿಯರು ಮನೆ ಕಟ್ಟುವಾಗ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿಯರು ಯಾವ ಇಸವಿಯಲ್ಲಿ ಮನೆ ಕಟ್ಟುತ್ತಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ.

2. ದಾವಾ ಆಸ್ತಿಗಳು ವಾದಿಯರಿಗೆ ಹೇಗ ಬಂದವು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪ್ರತಿವಾದಿಯರು ವಾಸವಾಗಿರುವ ಮನೆಗಳಿಂದ ಹಿಡಿದು ದೂದಿಹಳ್ಳಿ ಗ್ರಾಮದ ಕಲ್ಯಾಣ ಮಂಟಪದವರೆಗೆ ಇರುವ ಆಸ್ತಿ ಸರ್ವೆನಂಬರು ಎಂದರೆ ಸರಿ. ಅದರ ಸರ್ವೆನಂ.2 ಎಂದರೆ ಸರಿ. ಸದರಿ ಸರ್ವೆನಂಬರು 2/1, 2/2, 2/3 ರಂತೆ ಪೋಡಿಯಾಗಿರುತ್ತವೆ ಎಂದರೆ ಸರಿ. ಸರ್ವೆನಂ.2/3 ಆಸ್ತಿ ದೂದಿಹಳ್ಳಿ-ಮಾಸೂರರು ರಸ್ತೆಯ ಪಶ್ಚಿಮಕ್ಕೆ ಹೊಂದಿ ಇರುತ್ತದೆ ಎಂದರೆ ಸರಿ. ಅಲ್ಲಿ ಪ್ರತಿವಾದಿಯರ ಮನೆಗಳು ಇರುತ್ತವೆ ಎಂದರೆ ಸರಿ. ಸರ್ವೆನಂ.2/2 ಬ, ಕ್ಕೆ ಸಂಬಂದಿಸಿದಂತೆ ಚನ್ನಬಸಪ್ಪ ಮರಕಳ್ಳಿ ಎಂಬುವವರು ಕಲ್ಲೇಶ್ವರ ದೇವಸ್ಥಾನಕ್ಕೆ ಮೃತ್ಯು ಪತ್ರವನ್ನು ಮಾಡಿಕೊಟ್ಟಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ, ಸದರಿ ಆಸ್ತಿಯಲ್ಲಿ ನಮ್ಮೂರಿನ ದೇವಸ್ಥಾನಕ್ಕೆ ಸಂಬಂದಿಸಿದಂತೆ ಕಲ್ಯಾಣ ಮಂಟಪ ಇರುತ್ತದೆ ಎಂದರೆ ಸರಿ. ಪಂಚಾಯತಿ ಆಸ್ತಿ ಸಂಖ್ಯೆ 402/5, 402/5 ಎ ಆಸ್ತಿಗಳು ನಮ್ಮೂರಿನಲ್ಲಿ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ವಾಸವಾಗಿರುವಂತಹ ಮನೆಗಳು ಸುಮಾರು 50-60 ವರ್ಷದ ಹಳೆಯ ಮನೆಗಳು ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ಪ್ರತಿವಾದಿಯರು ಮನೆ ಕಟ್ಟಲು ಪ್ರಾರಂಭಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಪ್ರತಿವಾದಿಯರ ಮನೆಗಳು ಇದ್ದವು ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.